# ಶ್ರೀಮಾತೆಯವರು : ನಾನು ಕಂಡಂತೆ

ಬಂಗಾಳಿ ಮೂಲ : **ಸ್ವಾಮಿ ಭೂಮಾನಂದ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

**ಭಾಗ ೪**

**ಮೇ** ೬ ರಂದು ಬೆಳಿಗ್ಗೆ ಪೂಜ್ಯ ಸ್ವಾಮಿ ಧೀರಾನಂದರು (ಕೃಷ್ಣಲಾಲ್ ಮಹಾರಾಜ್) ಶರತ್ ಮಹಾರಾಜರ ಬಳಿ ಹೇಳಿದರು: ''ನಿನ್ನೆ ಬೆಳೆಗ್ಗೆಯಿಂದ ರಾಮನಿಗೆ (ಬಲರಾಮ ಬಸುವಿನ ಮಗ ರಾಮಕೃಷ್ಣ ಬಸು) ಹೊಟ್ಟೆನೋವು ಆರಂಭವಾಗಿದೆ. ರಾತ್ರಿಯಿಡೀ ನೋವಿನಿಂದ ಚಡಪಡಿಸುತ್ತ ಇದ್ದ – ಸ್ವಲ್ಪವೂ ನಿದ್ರಿಸಿಲ್ಲ.'' ರಾಮಕೃಷ್ಣ ಬಸು ಶ್ರೀಮಾತೆಯವರಿಂದ ದೀಕ್ಷೆ ಪಡೆದಿದ್ದ ಶಿಷ್ಯ. ಅವನ ತಂದೆ ಬಲರಾಮ ಬಸು ಶ್ರೀರಾಮಕೃಷ್ಣರ ಭಕ್ತನಾಗಿದ್ದ. ಡಾಕ್ಟರ್, ವೈದ್ಯರು ಎಲ್ಲರೂ ನೋಡಿದ್ದಾಗಿದೆ. ಔಷಧಿ, ಪಥ್ಯ, ಸೇವೆ ಇತ್ಯಾದಿಗಳನ್ನೂ ಚೆನ್ನಾಗಿ ಮಾಡಿದ್ದಾರೆ. ಆದರೂ ಅನಾರೋಗ್ಯ ಹೆಚ್ಚಾಗುತ್ತಾ ಹೋಯಿತು. ಕೊನೆಗೆ ಮೇ ೧೪ ರಂದು ಮಧ್ಯಾಹ್ನ ೩.೪೫ಕ್ಕೆ ರಾಮಬಾಬು ನಾಮಜಪ, ಭಜನೆ ಇತ್ಯಾದಿಗಳು ನಡೆಯುತ್ತಿದ್ದಂತೆಯೇ ಶ್ರೀರಾಮಕೃಷ್ಣರ ಪಾದಗಳನ್ನು ಸೇರಿದ. ಆಗ ಅಲ್ಲಿ ಶರತ್ ಮಹಾರಾಜ್, ಮಹಾಪುರುಷ್ ಮಹಾರಾಜ್ ಮೊದಲಾದ ಬೇಲೂರು ಮಠದ ಹಲವು ಮಂದಿ ಸಾಧುಗಳು ಸೇರಿದ್ದರು.

ಶ್ರೀಮಾತೆಯವರ ಕಾಯಿಲೆ ಉಲ್ಬಣವಾಗುತ್ತ ಹೋಗುತ್ತಿದ್ದುದರಿಂದ, ರಾಮಕೃಷ್ಣ ಬಸುವಿನ ನಿಧನವಾರ್ತೆಯನ್ನು ಅವರಿಗೆ ತಿಳಿಸಬಾರದು ಎಂದೇ ನಿಶ್ಚಯವಾಯಿತು. ಆದರೆ ಗೋಲಾಪ್-ಮಾ ಬಳಿ ಯಾವ ಮಾತೂ ನಿಲ್ಲಲಾರದು. ಲಾಟು ಮಹಾರಾಜರ ಮತ್ತು ರಾಮಬಾಬುಗಳ ನಿಧನವಾರ್ತೆಯನ್ನು ಅವರು ಶ್ರೀಮಾತೆಯವರಿಗೆ ತಿಳಿಸಿಬಿಟ್ಟರು. ಸುದ್ದಿ ತಿಳಿದು ಶ್ರೀಮಾತೆಯವರು ಅಳಲಾರಂಭಿಸಿದರು. ಶರತ್ ಮಹಾರಾಜ್ ತಮ್ಮ ದಿನಚರಿಯಲ್ಲಿ ಹೀಗೆ ಬರೆದಿದ್ದಾರೆ: ''H.M's (Holy Mother's) fever rose to 100°. She had a bad night... all due to hearing the sad news about Ram.'' ಅಂದರೆ – 'ಶ್ರೀಮಾತೆಯವರ ಜ್ವರ ೧೦೦ ಡಿಗ್ರಿಗೆ ಏರಿದೆ. ರಾತ್ರಿ ಹೊತ್ತು ನಿದ್ರೆಯಿಲ್ಲ.. ಇದೆಲ್ಲವೂ ರಾಮನ ನಿಧನವಾರ್ತೆಯನ್ನು ಕೇಳಿದ್ದರಿಂದ ಉಂಟಾಗಿದೆ.'



ಶ್ರೀಮಾತೆಯವರ ಜ್ವರ ಏನೇ ಮಾಡಿದರೂ ಕಡಿಮೆಯಾಗದ್ದರಿಂದ, ಶರತ್ ಮಹಾರಾಜ್ ಕವಿರಾಜನ (ವೈದ್ಯರ) ಚಿಕಿತ್ಸೆಗೆ ವ್ಯವಸ್ಥೆ ಮಾಡಿದರು. ಶ್ರೀಮಾತೆಯವರ ಶಿಷ್ಯ ಲಲಿತಮೋಹನ ಚಟ್ಟೋಪಾಧ್ಯಾಯನು ಪ್ರತಿದಿನವೂ ಕವಿರಾಜ ಶ್ರೀ ರಾಜೇಂದ್ರನಾಥ ಶಾಸ್ತ್ರಿ ಮಹಾಶಯನನ್ನು ಮೋಟರ್‌ಗಾಡಿಯಲ್ಲಿ ಕರೆದುಕೊಂಡು ಬರುತ್ತಿದ್ದ. ವೈದ್ಯ ಚಿಕಿತ್ಸೆ ಮಾಡಲು ಆರಂಭಿಸಿದ. ಒಂದು ದಿನ ಶ್ರೀಮಾತೆಯವರು ಕಡಲೆಪುರಿ ಮತ್ತು ಹುರಿಗಡಲೆಯನ್ನು ಒಂದು ತಟ್ಟೆಯಲ್ಲಿ ತೆಗೆದುಕೊಂಡು ಹೋಗಿ, ತಿನ್ನಲು ಕುಳಿತಿದ್ದರು. ಇದನ್ನು ಕೇಳಿ ಶರತ್ ಮಹಾರಾಜ್ ಅವರ ಬಳಿಗೆ ಹೋಗಿ ಕುಳಿತರು. ಅಷ್ಟರಲ್ಲಿ ಶ್ರೀಮಾತೆ ಕಡಲೆಪುರಿಯಿದ್ದ ತಟ್ಟೆಯನ್ನು ಹಿಂದಕ್ಕೆ ಇಟ್ಟಿದ್ದರು. ಶರತ್ ಮಹಾರಾಜ್ ಬಂದವರೇ ಶ್ರೀಮಾತೆಯವರಿಗೆ ಕೈಜೋಡಿಸಿ ಹೇಳಿದರು: ''ಅಮ್ಮಾ, ನಿಮ್ಮಿಂದ ಆ ತಟ್ಟೆಯನ್ನು ಭಿಕ್ಷೆಯಾಗಿ ಕೇಳುತ್ತಿದ್ದೇನೆ.'' ಶ್ರೀಮಾತೆ

ಯವರು ಸ್ವಲ್ಪವೂ ಅಸಮಾಧಾನವಿಲ್ಲದೆ ಆ ತಟ್ಟೆಯನ್ನು ಕೊಟ್ಟು ಬಿಟ್ಟರು. ಕರ್ತವ್ಯದ ಒತ್ತಡದಿಂದಾಗಿ ಈ ರೀತಿ ಶ್ರೀಮಾತೆಯವರಿಗೆ ತಿನ್ನಲು ಬಿಡದೆ ಇದ್ದುದರಿಂದ, ಶರತ್ ಮಹಾರಾಜರಿಗೆ ಅದೆಂಥ ಮನೋವ್ಯಥೆ ಉಂಟಾಯಿತು ಎಂಬುದು ಮುಂದೊಂದು ದಿನ ವ್ಯಕ್ತವಾಯಿತು. ಆ ವಿಷಯವನ್ನು ಬೇರೆ ಸಮಯದಲ್ಲಿ ಹೇಳುತ್ತೇನೆ.

ವೈದ್ಯರ ಚಿಕಿತ್ಸೆಯ ಅಂಗವಾಗಿ ಏನೇನು ವ್ಯವಸ್ಥೆಗಳಿದ್ದವೋ, ಅದರೊಂದಿಗೆ ಒಂದು ಸೇರು ನೀರನ್ನು ಅರ್ಧ ಸೇರು ಆಗುವಂತೆ ಕುದಿಸಿ, ಬಳಿಕ ಆರಿಸಿ ಶ್ರೀಮಾತೆಯವರಿಗೆ ಕುಡಿಸಬೇಕಿತ್ತು. ಈ ಬಗ್ಗೆ ಒಂದು ದಿನ ನಾನು ಶರತ್ ಮಹಾರಾಜರಿಗೆ ಹೇಳಿದೆ: ''ಹಳ್ಳಿಯಲ್ಲಿ ಈ ರೀತಿ ನೀರನ್ನು ಕುದಿಸಿ, ಅರ್ಧಕ್ಕಿಳಿಸಿ ಕುಡಿಸಿದರೆ, ಮಣ್ಣಿನ ಅಂಶವೇ ಜಾಸ್ತಿ ಉಳಿದೀತು. ಕಲ್ಕತ್ತದ ನೀರಾಗಿದ್ದರೆ, ಅದರಲ್ಲಿ ಪಟಿಕಾರದ ಅಂಶವೇ ಹೆಚ್ಚಾಗಿದ್ದೀತು (ಆಗ ಆಷಾಢಮಾಸ). ವೈದ್ಯರು ಇದನ್ನು ಬಯಸುತ್ತಾರೇನು?'' ಶರತ್ ಮಹಾರಾಜರು ಶಾಂತ ಭಾವದಿಂದ ಹೇಳಿದರು, ''ಈಗ ನಾವು ಈ ಕುರಿತು ಚಿಂತಿಸುವ ಸಮಯವೆ? ವೈದ್ಯರು ಹೇಗೆ ಹೇಳುತ್ತಾರೋ ಹಾಗೆಯೇ ಮಾಡುವುದು ನಮ್ಮ ಕರ್ತವ್ಯ'' ಎಂದರು. ನಾನು ಲಜ್ಜಿತನಾಗಿ ನನ್ನ ಕೆಲಸದಲ್ಲಿ ಮುಳುಗಿದೆ.

ಶ್ರೀಮಾತೆಯವರ ಕಾಯಿಲೆ ಅಧಿಕವಾದ ಹಾಗೆಲ್ಲ ಅವರ ದರ್ಶನ ಮಾಡುವ ವ್ಯವಸ್ಥೆಯಲ್ಲೂ (ಭಕ್ತರ ಭಕ್ತಿಯ ಅತಿರೇಕದಿಂದಾಗಿ) ಬದಲಾವಣೆ ಮಾಡಬೇಕಾಯಿತು. ಒಂದು ದಿನ ಒಬ್ಬ ಭಕ್ತ ಶ್ರೀಮಾತೆಯವರ ದರ್ಶನ ಮಾಡಲು ಹೋಗಿ, ಅವರ ಒಂದು ಪಾದವನ್ನು ಹಿಡಿದೆಳೆದು ತನ್ನ ಎದೆಯ ಮೇಲಿಟ್ಟುಕೊಂಡಿದ್ದ. ತಮ್ಮ ಪಾದಗಳ ಮೇಲೆ ಅವನು ಕಾಲಿಟ್ಟ ಕೂಡಲೇ ಶ್ರೀಮಾತೆ, ''ಅಯ್ಯೋ! ಇದೇನು!'' ಎನ್ನುತ್ತ ಎದ್ದು ನಿಂತರು. ಪಕ್ಕದಲ್ಲಿದ್ದ ಶ್ರೀಮಾತೆಯವರ ಸೇವಕನು ಭಕ್ತನ ಬಳಿಗೆ ಹೋಗಿ, ಅವನ ಕೈಯನ್ನು ಹಿಡಿದುಕೊಂಡು, ಕೆಳಅಂತಸ್ತಿಗೆ ಕರೆದುಕೊಂಡು ಹೋದ. ಈ ಸುದ್ದಿಯನ್ನು ತಿಳಿದ ಶರತ್ ಮಹಾರಾಜರು, ತಮಗೆ ತಿಳಿಸಿದ ನಂತರವೇ ಭಕ್ತರನ್ನು ಶ್ರೀಮಾತೆಯವರ ದರ್ಶನ ಪಡೆಯಲು ಅವರಿದ್ದ ದೇವರಕೋಣೆಗೆ ಕಳುಹಿಸಬೇಕೆಂದು ವ್ಯವಸ್ಥೆ ಮಾಡಿದರು. ಕೇವಲ ಹೊರಗಿನಿಂದಲೇ ದರ್ಶನ ಪಡೆದು ಬರಬೇಕೆಂದು ಆಗ ವ್ಯವಸ್ಥೆಯಾಯಿತು. ಒಂದು ದಿನ ಒಬ್ಬಾಕೆ ಮಹಿಳೆ ಬಂದಳು. ಅವಳನ್ನು ಯಾರೂ ಈ ಹಿಂದೆ ಶ್ರೀಮಾತೆಯವರ ಬಳಿ ನೋಡಿರಲಿಲ್ಲ. ಶ್ರೀಮಾತೆಯವರ ದರ್ಶನ ಮಾಡಬೇಕೆಂದು ಆಕೆ ಶರತ್ ಮಹಾರಾಜರಲ್ಲಿ ವ್ಯಾಕುಲ ಭಾವದಿಂದ ಪ್ರಾರ್ಥಿಸಿಕೊಂಡಳು. ಶರತ್ ಮಹಾರಾಜರು ಒಬ್ಬರು ಸಾಧುಗಳ ಹೆಸರನ್ನು ಕೂಗಿ ಕರೆದು ಹೇಳಿದರು– ''ಇವರನ್ನು ನೀನು ಕರೆದುಕೊಂಡು ಹೋಗಿ, ದರ್ಶನ ಮಾಡಿಸು.'' ಆ ಸಾಧುಗಳು ಆಗ ಕೆಲಸದಲ್ಲಿ ಮುಳುಗಿದ್ದರು. ಆದ್ದರಿಂದ ಅವರು ಈಗ ತಾನೇ ಸೇರಿಕೊಂಡಿದ್ದ ಒಬ್ಬರು ಹೊಸ ಬ್ರಹ್ಮಚಾರಿಗಳಿಗೆ ಆ ಕೆಲಸವನ್ನು ವಹಿಸಿಬಿಟ್ಟರು. ದೇವರ ಕೋಣೆಯಿಂದ ಯೋಗಿನ್–ಮಾ ಜೋರಾಗಿ ಕೂಗಿ ಹೇಳುತ್ತಿದ್ದದು ಕೇಳಿಸಿತು: ''ಶರತ್, ನೀನು ಯಾರನ್ನು ಮೇಲಂತಸ್ತಿಗೆ ಕಳುಹಿಸಿದ್ದೀಯಾ?'' ಅದನ್ನು ಕೇಳಿಸಿಕೊಂಡವರು ದೇವರ ಕೋಣೆಯತ್ತ ಓಡಿದರು. ದೇವರಕೋಣೆಯನ್ನು ಪ್ರವೇಶಿಸಿದಾಗ ಕಂಡುಬಂತು – ಆ ಮಹಿಳೆ ಶ್ರೀಮಾತೆಯವರ ಪಾದಗಳನ್ನು ತಮ್ಮ ಎದೆಯ ಮೇಲಿರಿಸಿಕೊಂಡು ಜೋರಾಗಿ ಆರ್ತನಾದ ಮಾಡುತ್ತಿದ್ದರು. ಅಷ್ಟರಲ್ಲಿ ಒಬ್ಬರು ಸಾಧುಗಳು ಅತ್ತ ಹೋಗಿ, ಆ ಮಹಿಳೆಯ ಕೈಗಳಿಂದ ಶ್ರೀಮಾತೆಯವರ ಪಾದಗಳನ್ನು ಬಿಡಿಸಿ, ಆಕೆಯ ಕೈಹಿಡಿದು ಕೆಳ ಅಂತಸ್ತಿಗೆ ಕರೆದುಕೊಂಡು ಬಂದರು. ಈ ಘಟನೆ ನಡೆದಾಗ ಗೋಲಾಪ್ ಮಾ ಹೇಳಿದ್ದರು: ''ಕಲ್ಲಿನ ಮೂರ್ತಿಯನ್ನು ಪೂಜೆ ಮಾಡುವುದು ಸ್ವಾಭಾವಿಕ. ಆ ದೇವತಾ ಮೂರ್ತಿ ಎಂದಿಗೂ ಏನೂ ಹೇಳಲಾರದು. ಆದರೆ ಮಾನವ–ದೇವತೆಯನ್ನು ಪೂಜೆ ಮಾಡುವುದು ಬಹಳ ಕಷ್ಟ. ಆ ದೇವತೆ ಮಾತನಾಡಬಲ್ಲುದು.'' ಆ ಮಹಿಳೆಗೆ ಎಲ್ಲವನ್ನೂ ತಿಳಿಯಹೇಳಿ ಕಳುಹಿಸಿಕೊಟ್ಟದ್ದಾಯಿತು.

ಆ ಮಹಿಳೆ ಹೊರಟುಹೋದ ಮೇಲೆ ಶರತ್ ಮಹಾರಾಜ್ ಈ ಹಿಂದೆ ಹೇಳಿದ ಆ ಸಾಧುವಿಗೆ ಹೇಳಿದರು: ''ನೋಡು, ನಿಮಗೆ ಹೇಳಿದ ಹಾಗೆ ಕೆಲಸ ಮಾಡಲಾಗದಿದ್ದರೆ ಬೇಲೂರು ಮಠಕ್ಕೆ ಹೋಗಿ ಬಿಡಿ.'' ಅವರು ಹಾಗೆ ಹೇಳಿದ ಸಾಧುಗಳೇನೂ ಶರತ್ ಮಹಾರಾಜರ ಮೇಲೆ ಉಳಿದವರಿಗಿಂತ ಕಡಿಮೆ ಶ್ರದ್ಧೆ, ಗೌರವ ಹೊಂದಿದ್ದರೆಂದಲ್ಲ; ಅಥವಾ ಅವರು ಕಷ್ಟಕರವಾದ ಕೆಲಸಗಳಿಗೆ ಉಳಿದವರಷ್ಟು ಗಮನ ಕೊಡುತ್ತಿರಲಿಲ್ಲ ಎಂದೂ ಅಲ್ಲ. ಅವರು ಶರತ್ ಮಹಾರಾಜರ ಮಾತುಗಳನ್ನು ಕೇಳಿ, ಅವರ ಮುಂದೆ ನಿಂತು ಹೀಗೆ ಹೇಳಿದರು: ''ಶ್ರೀಮಾತೆಯವರಿಗಾಗಿ ನಾನು ಇಲ್ಲಿ ವಾಸವಿದ್ದೇನೆ. ಅವರಿಗೆ ಒಳ್ಳೆಯದಾಗಿಲ್ಲ ಎಂದಿದ್ದರೆ, ಅದಕ್ಕೆ ಶಿಕ್ಷೆಯ ರೂಪದಲ್ಲಿ ನಾನು ಇಲ್ಲಿಂದ ಹೋಗುತ್ತೇನೆ.'' ಇಂಥ ಮಾತುಗಳನ್ನು ಹಳೆಯ ಕಾಲದವರಿಗೆ ಜೀರ್ಣಿಸಿಕೊಳ್ಳುವುದು ಸುಲಭವೇನಲ್ಲ. ಅವರ ಮಾತುಗಳನ್ನು ಕೇಳಿ ನಮ್ಮ ರಕ್ತ ಕೂಡ ಕುದಿಯತೊಡಗಿತ್ತು. ಆದರೆ ಶರತ್ ಮಹಾರಾಜರು ಶಾಂತಭಾವದಿಂದ ಹೇಳಿದರು: ''ನಾವೆಲ್ಲರೂ ಶ್ರೀಮಾತೆಯವರ ಸೇವೆಗಾಗಿಯೇ ಇಲ್ಲಿ ವಾಸವಾಗಿದ್ದೇವೆ. ಏನು ಮಾಡಿದರೆ ಶ್ರೀಮಾತೆಯವರಿಗೆ ಯಾವುದೇ ತೊಂದರೆಯುಂಟಾಗದು, ಅದಕ್ಕಾಗಿಯೇ ನಾವು ಎಲ್ಲವನ್ನೂ ಹೇಳುತ್ತಿದ್ದೇವೆ. ಇಲ್ಲದಿದ್ದರೆ ನೀವೇ ಎಲ್ಲವನ್ನೂ ನೋಡಿ, ಕೇಳಿ ಎಲ್ಲವನ್ನೂ ಮಾಡಬಲ್ಲಿರೋ ನನಗೆ ತಿಳಿಯದು.''

ತಮ್ಮ ಮಾತಿಗೆ ಎದುರುತ್ತರ ಕೊಟ್ಟ ಸಾಧುಗಳು, ತಮ್ಮಲ್ಲಿಯೇ ಒಬ್ಬರು ಎಂದು ಶರತ್ ಮಹಾರಾಜರಿಗೆ ಚೆನ್ನಾಗಿ ಗೊತ್ತಿತ್ತು. ಅವರ ದೇಹತ್ಯಾಗದ ನಂತರ ಅದೇ ಸಾಧುಗಳು ಈ ಘಟನೆಯನ್ನು ಉಲ್ಲೇಖಿಸುತ್ತ 'ಉದ್ಬೋಧನ'ದಲ್ಲಿ ಒಂದು ದಿನ

ಕಣ್ಣೀರಿಳಿಸುತ್ತ ಹೀಗೆ ಹೇಳಿದರು: ''ನನ್ನ ಆ ಮಾತನ್ನು ಅವರಿಗಲ್ಲದೆ ಬೇರೆ ಯಾರಿಗಾದರೂ ಸಹಿಸಿಲಾಗುತ್ತಿತ್ತೇ ಎಂದು ಹೇಳುವುದು ಬಹಳ ಕಷ್ಟ.''

ಈ ಸಂದರ್ಭದಲ್ಲಿ ಶ್ರೀಮಾತೆಯವರ ಒಂದು ಮಾತು ನೆನಪಿಗೆ ಬರುತ್ತಿದೆ. ಒಂದು ದಿನ ಅವರು ಮಾತಿನ ನಡುವೆ ಹೇಳಿದರು: ''ಒಳ್ಳೆಯ ಮಕ್ಕಳ ತಾಯಿಯಾಗುವುದು ಎಲ್ಲರಿಗೂ ಸಾಧ್ಯ. ಆದರೆ ಕೆಟ್ಟ ಮಕ್ಕಳನ್ನು ಯಾವ ತಾಯಿ ಸ್ವೀಕರಿಸುವಳು?'' ಶ್ರೀಮಾತೆಯವರ ಆಯಾಚಿತ ಕೃಪೆಯನ್ನು ನೋಡಿ ನಮಗೆಲ್ಲ ನಿತ್ಯವೂ ಸ್ಮರಣೆಯಾಗುತ್ತಿತ್ತು. ಅವರು ಕೆಟ್ಟವರನ್ನು ಸ್ವೀಕರಿಸಲೆಂದೇ ಜನಿಸಿದ್ದಾರೆ; ಅಂತೆಯೇ ಶ್ರೀಮಾತೆಯವರೊಂದಿಗೆ ಸ್ವಾಮಿ ಶಾರದಾನಂದರೂ ಬಂದಿದ್ದಾರೆ ಎಂಬುದಾಗಿ. ಯಾವ ಸಾಧುಗಳನ್ನು ಯಾವುದೇ ಆಶ್ರಮದಲ್ಲಿ ಇಟ್ಟುಕೊಳ್ಳಲು ಬಯಸುತ್ತಿರಲಿಲ್ಲವೋ, ಯಾರಿಂದ ಎಲ್ಲರಿಗೂ ತೊಂದರೆಯಾಗುತ್ತಿತ್ತೋ ಅವರಿಗೆ ಶರತ್ ಮಹಾರಾಜರು ಆಶ್ರಯ ನೀಡುತ್ತಿದ್ದರು. ಏನೇ ಇರಲಿ, ಎಲ್ಲರಿಗೂ ಹೊರಗಿನಿಂದ ಶ್ರೀಮಾತೆಯವರ ದರ್ಶನ ಪಡೆಯುವ ವ್ಯವಸ್ಥೆ ಮಾಡಲಾಯಿತು.

ಮಹಾಸಮಾಧಿಗೆ ಐದಾರು ದಿನಗಳ ಮುನ್ನ, ರಾತ್ರಿ ಹತ್ತರ ವೇಳೆಗೆ ಸರಳಾ (ಮುಂದೆ ಪ್ರವ್ರಾಜಿಕಾ ಭಾರತೀಪ್ರಾಣಾ) ಶ್ರೀಮಾತೆಯವರಿಗೆ ಊಟ ತಂದಾಗ, ಶ್ರೀಮಾತೆ ಅಳುತ್ತಾ ಹೇಳಿದರು: ''ನಾನು ನಿನ್ನ ಕೈಯಿಂದ ಊಟ ಮಾಡಲಾರೆ. ನನ್ನ ಮಗನ ಕೈಯಿಂದ ತಿನ್ನುತ್ತೇನೆ.'' 'ಮಗನ ಕೈಯಿಂದ' ಎಂಬ ಮಾತಿನ ಅರ್ಥ ಏನೆಂದು ಸರಿಯಾಗಿ ತಿಳಿಯದೆ, ಸರಳಾ ಶರತ್ ಮಹಾರಾಜರ ಬಳಿಗೆ ಹೋಗಿ ಎಲ್ಲವನ್ನೂ ಹೇಳಿದಳು. ಶರತ್ ಮಹಾರಾಜರು ಆತಂಕಗೊಂಡು ಶ್ರೀಮಾತೆಯವರ ಬಳಿಗೆ ಹೋಗಿ, ''ಅಮ್ಮಾ!'' ಎಂದು ಕರೆದರು. ಶ್ರೀಮಾತೆಯವರು ಕಣ್ತೆರೆದು ನೋಡಿದರು, ಶರತ್ ಮಹಾರಾಜರು ಹಾಸಿಗೆಯ ಬಳಿ (ಆಗ ಹಾಸಿಗೆ ನೆಲದ ಮೇಲೆ ಹಾಸಿತ್ತು) ಬಂದು ಕುಳಿತಿದ್ದರು. ಶ್ರೀಮಾತೆ ಅಳುತ್ತ ಹೇಳಿದರು : ''ಮಗೂ, ಅವರು ನನಗೆ ಊಟ ಕೊಡುವುದು ಬೇಡ. ನಾನು ನಿನ್ನ ಕೈಯಿಂದಲೇ ತಿನ್ನುತ್ತೇನೆ.'' ಶರತ್ ಮಹಾರಾಜರು ನಿಧಾನವಾಗಿ ಶ್ರೀಮಾತೆಯವರಿಗೆ ಹಾಲು ಕುಡಿಸತೊಡಗಿದರು. ಶ್ರೀಮಾತೆಯವರೂ ಶಾಂತರಾಗಿ ಹಾಲು ಕುಡಿಯತೊಡಗಿದರು. ಹಾಲು ಕುಡಿದ ನಂತರ ಶ್ರೀಮಾತೆಯವರು ತೃಪ್ತಿಗೊಂಡು, 'ಆಃ' ಎಂದು ಧ್ವನಿ ಮಾಡಿದರು. ಶರತ್ ಮಹಾರಾಜರು ನಿಧಾನವಾಗಿ ಶ್ರೀಮಾತೆಯವರ ಕೈ, ಕಾಲುಗಳಲ್ಲಿ ಕೈಯಾಡಿಸಲು ಆರಂಭಿಸಿದರು.

ಇಂದು ನೆನಪಾಗುತ್ತಿದೆ – ಕರ್ತವ್ಯದ ಒತ್ತಡದಿಂದಾಗಿ ಶರತ್ ಮಹಾರಾಜರು ಶ್ರೀಮಾತೆಯವರು ತಿನ್ನಬೇಕಿದ್ದ ಕಡಲೆಪುರಿ ಹಾಗೂ ಹುರಿಗಡಲೆಯನ್ನು ಭಿಕ್ಷೆ ಬೇಡಿದ್ದಕ್ಕಾಗಿ ತಮ್ಮ ಮನಸ್ಸಿನಲ್ಲಿ ಎಂತಹ ಸಂತಾಪವನ್ನು ಅನುಭವಿಸಿದ್ದರೋ ಅವರ ಮನಸ್ಸಿನ ಆ ಗಾಯವನ್ನು ಶ್ರೀಮಾತೆಯವರು ಆ ರೀತಿಯಲ್ಲಿ ದೂರಮಾಡಿದ್ದರು. ಏಕೆಂದರೆ, 'ಮಗನ ಕೈಯಿಂದ ತಿನ್ನುವೆ' ಎಂಬ ಮಾತನ್ನು ಅವರು ಹಿಂದೆಂದೂ ಆಡಿರಲಿಲ್ಲ.

ಶ್ರೀಮಾತೆಯವರಿಗೆ ವೈದ್ಯರು ಮಾಡಿದ ಚಿಕಿತ್ಸೆಯೂ ಫಲಕಾರಿಯಾಗಲಿಲ್ಲ. ಅವರ ಪರಿಸ್ಥಿತಿ ದಿನೇ ದಿನೇ ಚಿಂತಾಜನಕವಾಗುತ್ತಿದ್ದುದನ್ನು ಕಂಡು, ಅವರು ಶ್ರೀರಾಮಕೃಷ್ಣರಲ್ಲಿ ಒಂದಾಗುವ ದಿನ ದೂರವಿಲ್ಲವೆಂದು ಎಲ್ಲರಿಗೂ ಅರ್ಥವಾಗತೊಡಗಿತು. ಈ ಸುದ್ದಿ ಭಕ್ತರ ನಡುವೆ ಹರಿದಾಡಿತು. ಗುಂಪುಗುಂಪಾಗಿ ಸಾಧುಗಳು, ಗೃಹಸ್ಥರು, ಭಕ್ತರು ಶ್ರೀಮಾತೆಯವರ ದರ್ಶನ ಪಡೆಯಲು ದೇಶವಿದೇಶಗಳಿಂದ ಬರತೊಡಗಿದರು. ಶ್ರೀಮಾತೆಯವರ ಮಹಾಸಮಾಧಿಗೆ ಮೂರು ದಿನಗಳಿರುವಾಗ ವೈದ್ಯರ ಚಿಕಿತ್ಸೆಯನ್ನು ನಿಲ್ಲಿಸಲಾಯಿತು. ಡಾಕ್ಟರ್ ಕಾಂಜೀಲಾಲನ ಹೋಮಿಯೋಪಥಿ ಚಿಕಿತ್ಸೆ ಆರಂಭಿಸಲಾಗಿತ್ತು. ಜುಲೈ ೧೯ರಂದು ಶರತ್ ಮಹಾರಾಜರ ಹಲ್ಲು ಮೊದಲ ಬಾರಿ ಬಿದ್ದು ಹೋಯಿತು. ಅದರ ವಿಷಯವಾಗಿ ಅವರು ಹೇಳುತ್ತಿದ್ದರು: ''ನೋಡು, ನಮಗೂ ಕರೆ ಬಂದಿದೆ.'' ಈ ಮಾತನ್ನು ಕೇಳಿ ಲಾಟು ಮಹಾರಾಜರ ಮಾತು ನೆನಪಿಗೆ ಬಂತು. ಅವರು ಹೇಳಿದ್ದರು, ''ಮಹಾರಾಜ್ (ಸ್ವಾಮಿ ಬ್ರಹ್ಮಾನಂದರು), ಶರತ್ ಎಲ್ಲರೂ ಮನೆಗೆ ಮರಳುತ್ತಿದ್ದಾರೆ.''

*(ಮುಂದುವರಿಯುವುದು)*

## ಶಿವಾಜಿಯ ಶ್ರೀರಕ್ಷೆ

ಒಮ್ಮೆ ಮೊಗಲರಿಗೆ ಶಿವಾಜಿಯನ್ನು ಸೋಲಿಸಲು ಒಂದು ಉಪಾಯ ಹೊಳೆಯಿತು. ಅವನನ್ನು ನೇರ ಸೋಲಿಸಲು ಸಾಧ್ಯವಿಲ್ಲ. ಅದಕ್ಕೆ ಅವರು ಅಘೋರಿ ಮಾಂತ್ರಿಕರ ಸಹಾಯದಿಂದ ಶಿವಾಜಿ ವಾಸವಾಗಿದ್ದ ಕೋಟೆಗೆ ಹೊಂಚು ಹಾಕಿ ಪ್ರವೇಶಿಸಲು ಯತ್ನಿಸಿದರು. ಒಬ್ಬ ಯೋಧನಿಗೆ ಅದು ಸಾಧ್ಯವಾಯಿತು. ಅವನು ಶಿವಾಜಿಯಿದ್ದಲ್ಲಿಗೆ ಹೋದಾಗ ಅವನು ನಿದ್ರಿಸುತ್ತಿದ್ದ. ಆ ಯೋಧನು ಖಡ್ಗವನ್ನೆಳೆದು ಇನ್ನೇನು ಶಿವಾಜಿಗೆ ಅದರಿಂದ ಹೊಡೆಯಬೇಕು – ಅಷ್ಟರಲ್ಲಿ ಯಾರೋ ಅವನ ಕೈಹಿಡಿದು ತಡೆದಂತಾಯಿತು. 'ಇದೇನು? ಮಂತ್ರಸಾಧನೆ ಮಾಡಿ ನಾನು ಶಿವಾಜಿಯ ಕೋಟೆಯನ್ನು ಹೊಕ್ಕು, ಅವನ ಹತ್ತಿರಕ್ಕೂ ಬಂದೆ. ಈಗ ಇದು ಯಾರು ನನ್ನನ್ನು ತಡೆಯುತ್ತಿರುವವರು?' ಎಂದು ಅವನು ಯೋಚಿಸಿದ. ಆ ಕೂಡಲೇ ಒಂದು ಧ್ವನಿ ಅವನಿಗೆ ಕೇಳಿಸಿತು: 'ನೀನು ಆರಾಧಿಸುವವನ ಸಹಾಯದಿಂದ ನಿನಗೆ ಈ ಕೋಣೆಯನ್ನು ಪ್ರವೇಶಿಸಲು ಸಾಧ್ಯವಾಯಿತು. ಆದರೆ, ಅದೇ ರೀತಿ ಶಿವಾಜಿ ಆರಾಧಿಸುವ ವ್ಯಕ್ತಿ ಅವನನ್ನು ರಕ್ಷಿಸುವನು ಎಂದು ನಿನಗೆ ತಿಳಿದಿಲ್ಲವೆ?'

ಶಿವಾಜಿ ಆರಾಧಿಸುತ್ತಿದ್ದ ಗುರು ಪರಮ ಸಾತ್ತ್ವಿಕ ವ್ಯಕ್ತಿ. ಅವರ ಪಾವಿತ್ರ್ಯದ ಮುಂದೆ ಮಾಂತ್ರಿಕನ ಶಕ್ತಿ ಯಾವ ಕೆಲಸವನ್ನೂ ಮಾಡದೆ ಹೋಯಿತು. ಈ ರೀತಿ ದೇವರು ಶಿವಾಜಿಯ ರಕ್ಷಣೆ ಮಾಡುತ್ತಿದ್ದನು. *(ಸಂಗ್ರಹ)*